


ನನಗೆ ಆಶ್ಚರ್ಯ ಆಯಿತು. “ಓ, ಅನಂತಮೂರ್ತಿ ಅವರ ಕಾದಂಬರಿಯಲ್ಲಿ ಒಬ್ಬ ನಾರಣಪ್ಪ ಅಂತ ಬರುತ್ತಾರೆ.” ಎಂದೆ. ಅವನು, “ಅದು ನಾನು” ಎಂದು ಹೇಳಿ ಅನಂತಮೂರ್ತಿಯವರಿಗೆ ಸ್ವಲ್ಪ ಬೈದು, “ನನ್ನ ಕತೆಯನ್ನು ಹೇಳಲು ಅವರು ಯಾರು, ನಾನೇ ನನ್ನ ಕತೆಯನ್ನು ಹೇಳಬಹುದಲ್ಲ” ಎನ್ನುತ್ತಾ ಹೇಳಲು ಶುರು ಮಾಡಿದ. ಅವನು ಹೇಳಿದ ಕತೆಯನ್ನು ನಾನು ಈಗ ಓದುಗರ ಮುಂದೆ ಇಡುತ್ತೇನೆ. ಇದು ಸಾರ ಮಾತ್ರ. ಆದರೆ, ಇದನ್ನು ಹೇಳಲು ಶುರುಮಾಡುವ ಮೊದಲು ಅವನು ತನ್ನ ಮಣ್ಣು ಬಣ್ಣದ ಜುಬ್ಬದ ಜೋಬಿನಿಂದ ಒಂದು ಕ್ವಾರ್ಟರ್ ಬಾಟಲಿಯಲ್ಲಿ ಇದ್ದುದನ್ನು ಬಾಯಿಗೆ ಎರೆದುಕೊಂಡ. ನಾನು ನೋಡಿದೆ. “ನನಗೆ ನಿಮ್ಮ ಥರದ ಯಾವ ಸಭ್ಯತೆ ಇಲ್ಲ” ಎನ್ನುತ್ತಾ ಅದೇ ಜುಬ್ಬಾದಿಂದ ಬಾಯಿ ಒರಸಿಕೊಂಡ. “ನೀವು ಕುಡಿಯುವಾಗ ಅದಕ್ಕೆ ನೀರು ಸೇರಿಸುವ ಕ್ರಮವಿಲ್ಲವಾ?” ಎಂದು ಕೇಳಿದೆ. “ನೀವು ನನ್ನ ಹತ್ತಿರ ಮಾತಾಡುವಾಗ ನೀವು ಗೀವು ಎನ್ನುವುದು ಬೇಡ. ನಾನು ಶುದ್ಧ ಘಟಿಂಗ, ಮೂರ್ಖ ಮತ್ತು ಅವಿವೇಕಿ. ನನಗೆ ಯಾರಾದರೂ